# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1815(2189) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 18-03-2022. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯಲ್ಲಿ ಕೃಷಿ ಮಹಾವಿದ್ಯಾಲಯ (ಔರಾದ್ ತಾಲ್ಲೂಕಿನಲ್ಲಿ) ಪ್ರಾರಂಭಿಸಲಾಗುವುದು ಯಾವಾಗ; ಈ ಹಿಂದೆ ಸದನದಲ್ಲಿ ಆಶ್ವಾಸನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ಬಲವರ್ಧನೆ/ ಹೊಸ ಕೃಷಿ ಕಾಲೇಜುಗಳ ಸ್ಥಾಪನೆ ಮತ್ತು ಅವುಗಳ ಇನ್ನಿತರ ಅಭಿವೃದ್ಧಿಗೆ ಅಗತ್ಯವಿರುವ ಅಂಶಗಳನ್ನು ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು(Expert Committee) ರಚಿಸಲಾಗಿರುತ್ತದೆ. ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಹೊಸ ಕೃಷಿ ಕಾಲೇಜುಗಳನ್ನು ಸ್ಥಾಪಿಸುವಂತಹ ಪ್ರಸ್ತಾವನೆಗಳನ್ನು ಈ ಸಮಿತಿ ಮುಂದೆ ಮಂಡಿಸಲಾಗುವುದು.<br><br>ಈ ಪರಿಣಿತಿ ಸಮಿತಿಯು ಇದುವರೆವಿಗೂ 5 ಸಭೆಗಳನ್ನು ನಡೆಸಿದ್ದು, ದಿನಾಂಕ:18-12-2019ರಲ್ಲಿ ಜರುಗಿದ ಸಭೆಯಲ್ಲಿ ನೂತನ ಕೃಷಿ ಕಾಜೇಜುಗಳನ್ನು ಪ್ರಾರಂಭಿಸುವ ಮುಂಚೆ ಈಗಿರುವ ಕೃಷಿ ಕಾಲೇಜುಗಳ ಬಲವರ್ಧನೆಗೆ ಇರುವಂತಹ ಕೊರತೆಗಳನ್ನು ಗಮನಿಸಿ,<br>1) ಮೂಲಭೂತ ಸೌಕರ್ಯಗಳು:<br>2) ಬೋಧಕ ಸಿಬ್ಬಂದಿಯ ಪ್ರಮಾಣ<br>3) ಈಗಿರುವ ಕೃಷಿ ಪದವೀಧರರ ಲಭ್ಯತೆ ಬೇಡಿಕೆ – ಇವುಗಳನ್ನು ಪರಿಶೀಲಿಸಿ ಇವುಗಳ ಸಮತೋಲನದ ನಂತರ ಮುಂಬರುವ |

| | | |
|---|---|---|
| | | ಪ್ರಸ್ತಾವನೆಗಳನ್ನು ಕೈಗೊಳ್ಳಬಹುದಾಗಿದೆ ಎಂದು ಪರಿಣಿತ ಸಭೆಯ ನಡವಳಿಯಾಗಿರುತ್ತದೆ.<br>4) ಅದರಂತೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಕೃಷಿ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಕುರಿತು ಪ್ರಸ್ತಾವನೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ (Expert Committee) ಆಯೋಜಿಸಲು ದಿನಾಂಕವನ್ನು ನಿಗಧಿಪಡಿಸಲು ಪರಿಶೀಲಿಸಲಾಗುತ್ತಿದ್ದು, ಸಮಿತಿಯ ಶಿಫಾರಸ್ಸನ್ನು ನಿರೀಕ್ಷಿಸಲಾಗಿದೆ.<br><br>ಹೌದು. |
| ಆ | ಇದ್ದಲ್ಲಿ, 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡದಿರುವುದಕ್ಕೆ ಕಾರಣಗಳೇನು; | ಪರಿಣಿತಿ ಸಮಿತಿಯ ಶಿಫಾರಸ್ಸನ್ನು ನಿರೀಕ್ಷಿಸಲಾಗಿದೆ. |
| ಇ | ಜಿಲ್ಲೆಯಲ್ಲಿ Diploma in Agriculture ಕಾಲೇಜು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| (ಈ) | ಬಂದಿದ್ದಲ್ಲಿ ಈ Diploma ಮಹಾವಿದ್ಯಾಲಯ ಉನ್ನತೀಕರಣಗೊಳಿಸಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಲು ಸರ್ಕಾರ ಕ್ರಮವಹಿಸುವುದೇ? (ಸೂಕ್ತವಾದ ವಿವರ ನೀಡುವುದು). | ಸದ್ಯಕ್ಕೆ ಅನ್ವಯವಾಗುವುದಿಲ್ಲ. |

ಸಂಖ್ಯೆ: AGRI-AUR/17/2022

(ಬಿ.ಸಿ ಪಾಟೀಲ್)
ಕೃಷಿ ಸಚಿವರು